**ಅಸಲು ದಾವಾ ನಂಃ 11/2015**
**ಪಿ.ಡಬ್ಲ್ಯೂಃ 1,**

**ದಿನಾಂಕ :04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ಪ್ರತಿವಾದಿ ಪರ ವಕೀಲರಿಂದ :**

ನನ್ನ ವಾದ ಪತ್ರದಲ್ಲಿ ತೋರಿಸಿದ ನನ್ನ ವಿಳಾಸ ಬೋರಾಬಾಯಿ ನಗರ, ಸೋನೆಘರ, ಕಲಬುರಗಿ ಈ ಸ್ಥಳ ನನ್ನ ತವರು ಮನೆ ವಿಳಾಸ. ನನ್ನ ವಿಧ್ಯಾಭ್ಯಾಸ ಕಲಬುರಗಿಯಲ್ಲಿ ಆಗಿದೆ. ನನಗೆ 8 ವರ್ಷ ಇದ್ದಾಗ ನನ್ನ ತಂದೆ ತೀರಿ ಹೋಗಿದ್ದ ಅಲ್ಲಿತನಕ ನಾವು ಡೋನೂರ ಗ್ರಾಮದಲ್ಲಿದ್ದೇವು. ಮೀನಪ್ಪ ಆತನ ತಂದೆಗೆ ಒಬ್ಬನೇ ಮಗ. ಶಿವರಾಯ ತಂದೆ ಕಾಶೆಪ್ಪ ಮದರಿ ಮತ್ತು ಬಂಡಪ್ಪ ಮದರಿ ನಮ್ಮ ಕಟುಂಬಕ್ಕೆ ಏನಾಗಬೇಕು ಪ್ರಶ್ನೆಗೆ ಸಾಕ್ಷಿ ನಾನು ಚಿಕ್ಕವರಿದ್ದಾಗ ಊರು ಬಿಟ್ಟು ಹೋಗಿದ್ದೇವೆ ಹಾಗಾಗಿ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಸ.ನ. 93/ಎ ಇದರ ಚೆಕ್ ಬಂದಿ ನನಗೆ ಗೊತ್ತಿಲ್ಲಾ. ಅದೇ ರೀತಿ ಸ.ನ. 42/ಇ ಇದರ ಚೆಕ್ ಬಂದಿ ನನಗೆ ಗೊತ್ತಿಲ್ಲಾ. ನಾನು ಹುಟ್ಟಿನಿಂದ ಈ ದಾವಾ ಜಮೀನುಗಳಿಗೆ ಹೋಗಿಲ್ಲಾ ಎಂದರೆ ಸರಿ. ಸ.ನ. 93/ಎ ರಲ್ಲಿ ನಮ್ಮ ತಂದೆಗೆ 1 ಎಕರೆ 20 ಗು ಬಂದಿದ್ದು ಅವರು 1990 ರಲ್ಲಿ ಅವರು ಆತನ ಸಹೋದರ ದೇವಿಂದ್ರಪ್ಪ ಗೆ ಮಾರಾಟ ಮಾಡಿ ಅವತ್ತಿನಿಂದ ದೇವಿಂದ್ರಪ್ಪ ಕುಟುಂಬದವರು ಬಿತ್ತಿ, ಬೆಳೆದು ಉಣುತ್ತಿದ್ದಾರೆ ಎಂದರೆ ಸರಿ. ಈಗ ದಾವಾ ಆಸ್ತಿಯ ಬೆಲೆ ಹೆಚ್ಚಾದ ಕಾರಣ ದುರುದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**